ದಿ:10-01-2018 ಪಿಡಬ್ಲೂ -1

ಮುಂದುವರೆದ ಮುಖ್ಯ ವಿಚಾರಣೆ ಃ ಅರ್ಜಿದಾರರ ಪರ ಶ್ರೀಮತಿ ಎಂ ಬಿ ವಕೀಲರಿಂದಃ

ನಾನು ಈ ದಿನ ನನ್ನ ಮುಂದುವರೆದ ಮುಖ್ಯ ವಿಚಾರಣೆಯ ಭಾಗವಾಗಿ 2 ನೇ ಮತ್ತು 3 ನೇ ಅರ್ಜಿದಾರರ ಶಾಲಾ ದೃಡೀಕರಣ ಪತ್ರವನ್ನು ಹಾಜರುಮಾಡಿದ್ದು ಅವುಗಳನ್ನು ನಿಪಿಃ 1 ಮತ್ತು 2 ಎಂದು ಗುರುತಿಸಲಾಯಿತು. 2-ಪಹಣಿ ಪತ್ರಿಕೆಗಳನ್ನು ಹಾಜರುಮಾಡಿದ್ದು ಅವುಗಳನ್ನು ನಿಪಿ3 ಮತ್ತು 4 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಪ್ರ ಸಿ ನ್ಯಾ ಮತ್ತು ಜೆ ಎಂ ಎಫ್ ಸಿ
ಚಿತ್ರದುರ್ಗ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಚಿತ್ರದುರ್ಗ
ಪಿಸಿಃ ನಂಃ **1 /18**

ಪಿ ಆರ್ ಸುನೀಲ್ ಕುಮಾರ್ ಪಿಡಬ್ಲ್ಯು –1
ಪ್ರಮಾಣ ವಚನ ಬೊಧಿಸಿದ ದಿನಾಂಕಃ 10–1–2018

<u>ಸಾಕ್ಷಿಯ ಪ್ರಮಾಣ ಪೂರ್ವ ಹೇಳಿಕೆ</u>

ಆರೋಪಿ ನನಗೆ ನೀಡಿದ ಚೆಕ್ಕನ್ನು ಹಾಜರುಪಡಿಸಿರುತ್ತೇನೆ. ಸದರಿ ಚೆಕ್ ನಲ್ಲಿರುವ ಸಹಿ ಆರೋಪಿಯ ಸಹಿಯಾಗಿರುತ್ತದೆ. ಚೆಕ್ಕನ್ನು ನಿಪಿಃ1 ಎಂದು, ಅದರಲ್ಲಿರುವ ಆರೋಪಿಯ ಸಹಿಯನ್ನು ನಿಪಿಃ1 ಎ ಎಂದು ಗುರುತಿಸಲಾಯಿತು. ಬ್ಯಾಂಕ್ ನೀಡಿದ ಹಿಂಬರಹಗಳನ್ನು ನಿಪಿಃ2 ಎಂದು ಗುರುತಿಸಲಾಯಿತು. ಆರೋಪಿಗೆ ಕಳಿಸಿದ ನೋಟೀಸಿನ ಕಚೆರಿ ಪ್ರತಿಯನ್ನು ನಿಪಿಃ 3 ಎಂದು ಗುರುತಿಸಲಾಯಿತು. 2–ಅಂಚೆ ರಸೀದಿಗಳನ್ನು ಒಟ್ಟಾಗಿ ನಿಪಿಃ4 ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತಿ ಪತ್ರವನ್ನು ನಿಪಿಃ 5 ಎಂದು ಮತ್ತು ಜಾರಿಯಾಗದೇ ಹಿಂದಿರುಗಿದ ಅಂಚೆ ಲಕೋಟೆಯನ್ನು ನಿಪಿಃ 6 ಎಂದು ಗುರುತಿಸಲಾಯಿತು. ನಿಪಿಃ 6 ರಲ್ಲಿಯ ನೋಟೀಸಿನ ಪ್ರತಿಯನ್ನು ನಿಪಿಃ 6 ಎ ಎಂದು ಗುರುತಿಸಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಪ್ರ ಸಿ ನ್ಯಾ ಮತ್ತು ಜೆ ಎಂ ಎಫ್ ಸಿ

ಚಿತ್ರದುರ್ಗ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಚಿತ್ರದುರ್ಗ
ಪಿಸಿಃ ನಂಃ **706 /17**

ಗೀತಾ ಕೆ ಆರ್ ಪಿಡಬ್ಲ್ಯು -1
ಪ್ರಮಾಣ ವಚನ ಬೊಧಿಸಿದ ದಿನಾಂಕಃ 10-01-2018

ಸಾಕ್ಷಿಯ ಪ್ರಮಾಣ ಪೂರ್ವ ಹೇಳಿಕೆ

ಆರೋಪಿ ನನಗೆ ನೀಡಿದ ಚೆಕ್ಕನ್ನು ಹಾಜರುಪಡಿಸಿರುತ್ತೇನೆ. ಸದರಿ ಚೆಕ್ ನಲ್ಲಿರುವ ಸಹಿ ಆರೋಪಿಯ ಸಹಿಯಾಗಿರುತ್ತದೆ. ಚೆಕ್ಕನ್ನು ನಿಪಿಃ1 ಎಂದು, ಅದರಲ್ಲಿರುವ ಆರೋಪಿಯ ಸಹಿಯನ್ನು ನಿಪಿಃ1 ಎ ಎಂದು ಗುರುತಿಸಲಾಯಿತು. ಬ್ಯಾಂಕ್ ನೀಡಿದ ಹಿಂಬರಹಗಳನ್ನು ನಿಪಿಃ2 ಎಂದು ಗುರುತಿಸಲಾಯಿತು. ಆರೋಪಿಗೆ ಕಳಿಸಿದ ನೋಟೀಸಿನ ಕಚೆರಿ ಪ್ರತಿಯನ್ನು ನಿಪಿಃ 3 ಎಂದು ಗುರುತಿಸಲಾಯಿತು. ಅಂಚೆ ರಸೀದಿಯನ್ನು ನಿಪಿಃ4 ಎಂದು ಮತ್ತು ಅಂಚೆ ಸ್ವೀಕೃತಿಯನ್ನು ನಿಪಿಃ5 ಎಂದು ಗುರುತಿಸಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಪ್ರ ಸಿ ನ್ಯಾ ಮತ್ತು ಜೆ ಎಂ ಎಫ್ ಸಿ
ಚಿತ್ರದುರ್ಗ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಚಿತ್ರದುರ್ಗ

ಸಿ.ಸಿ. **1860/2016**

ಪಿಡಬ್ಲ್ಯೂ ಃ 4
ಸಿಡಬ್ಲ್ಯೂ ಃ 2
ಪ್ರಮಾಣ ವಚನ ಭೋ ಃ 10–01–2018
ದಿಸಿದ ದಿನಾಂಕ ಃ

ಸಾಕ್ಷಿಯ ಹೆಸರು ಃ **ಯಕ್ಯಾನಾಯ್ಕ**
ತಂದೆಯ ಹೆಸರು ಃ **ಓಬ್ಯಾನಾಯ್ಕ**
ವಯಸ್ಸು ಃ 66 ವರ್ಷ
ಉದ್ಯೋಗ ಃ ವ್ಯವಸಾಯ
ವಿಳಾಸ ಃ ಹಳಉದರ ಲಂಬಾಣತಾಂಡ, ಚಿತ್ರದುರ್ಗ.

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದಃ**

ನನಗೆ ಈಗ ತೋರಿಸಿದ ಮಹಜರ್‌ನಲ್ಲಿ ಕಂಡು ಬರುವ ಸಹಿ ನನ್ನದಾಗಿರುತ್ತದೆ. ಸದರಿ ಮಹಜರ್‌ನ್ನು **ಈಗಾಗಲೇ** ನಿಪಿಃ1 **ಎಂದು ಗುರುತಿಸಲಾಗಿದ್ದು** ಸಾಕ್ಷಿಯ ಸಹಿಯನ್ನು ನಿಪಿಃ1 **ಡಿ** ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು 7–8 ವರ್ಷದ ಹಿಂದೆ **ಚಿತ್ರದುರ್ಗ ನಗರದ** ಬಸ್‌ಸ್ಟಾಂಡ್ **ನಲ್ಲಿ** ಮಾಡಿರುತ್ತೇನೆ. **ಆರೋಪಿಯ ಪರಿಚಯ** ನನಗೆ **ಇದೆ.** ಆತ ನಮ್ಮ ಊರಿನವನು. **ನನ್ನ ಸಮಕ್ಷಮ ಆತನಿಂದ** ಅಬಕಾರಿ ಪೊಲೀಸರು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ.

ನನಗೆ ಈಗ ತೋರಿಸಿದ ಮಾದರಿ ಸೀಲ್‌ನ ನಮೂನೆ ಹಾಗೂ ಮಾಲುಪಟ್ಟಿಯಲ್ಲಿ ಕಂಡು ಬರುವ ಸಹಿಯು ನನ್ನದಾಗಿರುತ್ತದೆ. ಅವುಗಳನ್ನು ಕ್ರಮವಾಗಿ ನಿಪಿಃ2 ಮತ್ತು 3 ಎಂದು, ಅದರಲ್ಲಿಯ ಸಾಕ್ಷಿಯ ಸಹಿಯನ್ನು ಕ್ರಮವಾಗಿ ನಿಪಿಃ2 **ಸಿ** ಮತ್ತು 3 **ಸಿ ಎಂದು** ಗುರುತಿಸಲಾಯಿತು. **ಅವುಗಳಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.**

ನ್ಯಾಯಾಲಯದ ಮುಂದೆ ಇರುವ ಮೂರು ಸಾರಾಯಿ ಟೆಟ್ರಾಪ್ಯಾಕೆಟ್‌ಗಳ ಮೇಲೆ ಇರುವ ಚೀಟಿಯಲ್ಲಿ ಕಂಡು ಬರುವ ಸಹಿ ನನ್ನದಾಗಿರುತ್ತದೆ. ಸದರಿ ವಸ್ತುಗಳನ್ನು **ಈಗಾಗಲೇ** ಮುದ್ದೆ ಮಾಲು 1 ರಿಂದ 3 ಎಂದು **ಗುರುತಿಸಲಾಗಿದ್ದು, ಅವುಗಳಲ್ಲಿಯ** ಸಾಕ್ಷಿಯ ಸಹಿಯನ್ನು ಮುದ್ದೆ ಮಾಲು 1 **ಸಿ** ರಿಂದ 3 **ಸಿ** ಎಂದು ಗುರುತಿಸಲಾಯಿತು.

ಸದರಿ ಸಹಿಗಳನ್ನು ನಾನು ಯಾವಾಗ ಮಾಡಿರುತ್ತೇನೆ ಎಂದು ನೆನಪಿಲ್ಲ.

(ಸಾಕ್ಷಿಯನ್ನು ಮಾನ್ಯ ಸ ಸ ಅ ರವರ ಕೋರಿಕೆಯ ಮೇರೆಗೆ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಿದೆ).

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ**

ನಾನು 4 **ನೇ ತರಗತಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ.** ನಾನು ಯಾವುದೇ ದಾಖಲಾತಿಗೆ ಸಹಿ ಮಾಡುವ ಕಾಲಕ್ಕೆ ಅದರಲ್ಲಿ ಏನು ಬರೆದಿದೆ ಎಂದು ತಿಳಿದು ಸಹಿ ಮಾಡುತ್ತೇನೆ ಎಂದರೆ ಸರಿ. ದಿಃ 07–09–2016 ಸಂಜೆ 4.30 ರ ಸವಯಕ್ಕೆ ಪೊಲೀಸರು ಆರೋಪಿಗೆ ಸೇರಿದ ನಮ್ಮ ಊರಿನಲ್ಲಿರುವ ಡಾಬಾದ ಮುಂದೆ ಪಂಚನಾಮೆಯನ್ನು ಜರುಗಿಸಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಮತ್ತು ಚಾಸಾ–1 **ಬಸವರಾಜನಾಯ್ಕು ರವರು** ಪಂಚರಾಗಿ ಸಹಕರಿಸಿದೆವು ಎಂದರೆ ಸರಿಯಲ್ಲ. ನಮ್ಮ ಸಮಕ್ಷಮ ಡಾಬಾದಲ್ಲಿ ಶೋಧನೆ ಮಾಡಿದಾಗ ಕ್ಯಾಶ್ ಟೇಬಲ್ ಪಕ್ಕದಲ್ಲಿ ಒಂದು ರಟ್ಟಿನ ಪೆಟ್ಟಿಗೆಯಲ್ಲಿ 180 ಎಂ ಎಲ್ ನ 24 ಓಲ್ಡ್ ಟ್ಯಾವರಿನ್ ವಿಸ್ಕಿಯ ಟೆಟ್ರಾಪ್ಯಾಕ್‌ಗಳು, 180 ಎಂ ಎಲ್ ನ ಬಿ ಪಿ ವಿಸ್ಕಿಯ 03 ಟೆಟ್ರಾಪ್ಯಾಕ್‌ಗಳು, ಹೇವರ್ಡ್ಸ್ ಚೇರ್ಸ್ ವಿಸ್ಕಿಯ 90 ಎಂ ಎಲ್‌ನ 14 ಟೆಟ್ರಪ್ಯಾಕೆಟ್‌ಗಳು ಇರುವುದು ಕಂಡು ಬಂತು ಎಂದರೆ ಸರಿಯಲ್ಲ. ಅವುಗಳಲ್ಲಿ ತಲಾ ಒಂದು ಪ್ಯಾಕೆಟ್‌ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಮಾದರಿಯಾಗಿ ಪ್ರತ್ಯೇಕವಾಗಿ ತೆಗೆದು ಸೀಲ್ ಮಾಡಲಾಯಿತು ಎಂದರೆ ಸರಿಯಲ್ಲ. ಮಾದರಿಗಾಗಿ ತೆಗದ ಹಾಗೂ ಪ್ಯಾಕೆಟ್‌ಗಳ ಮೇಲೆ ನಮ್ಮ ಸಹಿವುಳ್ಳ ಚೀಟಿಯನ್ನು ಅಂಟಿಸಿದರು ಎಂದರೆ ಸರಿಯಲ್ಲ. ಸ್ಥಳದಲ್ಲಿ ಇದ್ದು ನಾನು ನಿಪಿಃ1 ರಿಂದ 3 ದಾಖಲಾತಿಗಳಿಗೆ ನಾನು ನನ್ನ ಸಹಿಯನ್ನು ಮಾಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನನ್ನ ಸಂಬಂಧಿ ಎಂದರೆ ಸರಿಯಲ್ಲ. ಆತ ನಮ್ಮ ಗ್ರಾಮದವನು ಅದ್ದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಇರುವುದಿಲ್ಲಃ

**(ಮರು ವಿಚಾರಣೆ ಇಲ್ಲ)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿಯಿದೆ**

ಪ್ರ.ಸಿ.ನ್ಯಾ. ಮತ್ತು ಜೆಎಂಎಫ್‌ಸಿ.,
ಚಿತ್ರದುರ್ಗ.

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಚಿತ್ರದುರ್ಗ**

**ಸಿ.ಸಿ. 1860 /2016**

| | | |
|---|---|---|
| ಪಿಡಬ್ಲೂ | ಃ | 5 |
| ಸಿಡಬ್ಲೂ | ಃ | 10 |
| ಪ್ರಮಾಣ ವಚನ ಭೋ ದಿಸಿದ ದಿನಾಂಕ | ಃ | 10-01-2018 |

| | | |
|---|---|---|
| ಸಾಕ್ಷಿಯ ಹೆಸರು | ಃ | ಓ ತಿಪ್ಪಯ್ಯ |
| ತಂದೆಯ ಹೆಸರು | ಃ | ಓಬಯ್ಯ |
| ವಯಸ್ಸು | ಃ | 58 ವರ್ಷ |
| ಉದ್ಯೋಗ | ಃ | ಪಿ ಎಸ್ ಐ ಅಬಕಾರಿ ವಲಯ |
| ವಿಳಾಸ | ಃ | ಚಿತ್ರದುರ್ಗ ವಲಯ |

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ಯವರಿಂದಃ**

ನಾನು ದಿಃ 2012 ರಿಂದ ಇಲ್ಲಿಯವರೆಗೆ ಚಿತ್ರದುರ್ಗ ವಲಯದಲ್ಲಿ ಅಬಕಾರಿ ನಿರೀಕ್ಷನಾಗಿ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇ ನೆ.

ದಿಃ 22-9-2016 ರಂದು ಈ ಪ್ರಕರಣದ ಮುಂದಿನ ತನಿಖೆಯನ್ನು ಚಾಸಾ-9 ರವರಿಂದ ಪಡೆದುಕೊಂಡೆನು. ದಿಃ28-9-2016 ರಂದು ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಮಾದರಿ ಸಾರಾಯಿಯನ್ನು ರಾಸಾಯನಿಕ ವಿಶ್ಲೇಷಣೆಗೆ ಕಳುಹಿಸಿಕೊಟ್ಟೆನು. ಆ ಬಗ್ಗೆ ಸದರಿ ಕಚೇರಿಯಿಂದ ಸ್ವೀಕೃತಿಯನ್ನು ಕೂಡ ಪಡೆದುಕೊಂಡೆನು. ಸದರಿ ಮನವಿ ಪತ್ರವನ್ನು ನಿಪಿಃ6 ಎಂದು ಅದರಲ್ಲಿಯ ಸಾಕ್ಷಿಯ ಸಹಿಯನ್ನು ನಿಪಿಃ6 ಎ ಎಂದು ಗುರುತಿಸಲಾಯಿತು. ದಿಃ 17-10-2016 ರಂದು ನಾನು ರಾಸಾಯನಿಕ ವರದಿಯನ್ನು ಸ್ವೀಕರಿಸಿದೆನು. ರಾಸಾಯನಿಕ ವರದಿಯನ್ನು ನಿಪಿಃ7 ಎಂದು ಗುರುತಿಸಲಾಯಿತು. ನಂತರ ನಾನು ದಿಃ5-12-2016 ರಂದು ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದೆನು.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ರಾಸಾಯನಿಕ ಪರೀಕ್ಷೆಗೆ ಸಾರಾಯಿಯನ್ನು ಕಳುಹಿಸಿಕೊಟ್ಟೆನು ಎಂದು

ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ತನಿಖಾ ಕಾಲದಲ್ಲಿ ಆರೋಪಿ ಯಾವುದೇ ಗುನ್ಹೆಯನ್ನು ಮಾಡಿಲ್ಲ ಎಂದು ಕಂಡು ಬಂದರೂ ನಾನು ಆರೋಪಿ ವಿರುದ್ದ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಪ್ರ ಸಿ ನ್ಯಾ ಮತ್ತು ಜೆ ಎಂ ಎಫ್ ಸಿ
ಚಿತ್ರದುರ್ಗ.